SRI M. C. BASAPPA—According to you, 24 societies are defaulters what is the arrangement you are going to make in that area to advance the loan to the people who are not defaulters ?

SRI V. M. KUSHNOOR—We are advancing the loans even though they are the defaulters. The members, who have paid back the amount, we are not stopping any advance to them.

SRI M. C. BASAPPA—But the Department says that some of the societies are not eligible f r credit ?

SRI V. M. KUSHNOOR—We have given instructions to all the societies that even one member pays back, he must be advanced loan, th t is the standing instruction.

Panchayats without reserved seats in Hosadurga Taluk

632. SRI K. VENKATARAMAIAH (Hosadurga)—Will the Minister for Rural Development and Panchayati Raj be pleased to state :-

(a) the names of the Village Panchayats wherein there are no reserved seats in the Panchayats of Hosadurga Taluk.

(b) the authority responsible for removing the reserved seats earmaked in favour of depressed class since long time in Bagur Panchayat ;

(c) whether the Government intend to provide a reserved seat in favour of depressed class people in Bagur Panchayat as per the policy of the Government ;

(d) whether the Government intend to rectify the injustice done in most of the Panchayats wherein Blocks have been divided into without giving proper representation to reserved seats ?

SRI K. PRABHAKAR (Minister for Rural Development and Panchayat Raj) —

(a) Bagur and Kurubarahalli.

(b) As per sub-rule 3 of the Karnataka Village Panchayat Rules 1959 (Seats reserved for Harijans and ladies.

(c) There is no provision in the rules mentioned to above.

(d) If injustice has been done, this will be rectified as per the provisions of Law.

ಶ್ರೀ ಕೆ. ವೆಂಕಟರಾಮಯ್ಯ—ಬಾಗೂರು ಮತ್ತು ಕುರುಬರಹಳ್ಳಿಯಲ್ಲಿದ್ದಂತ ರಿಸರ್ವ್ ಸೀಟು ಗಳನ್ನು ಇಲ್ಲದ ಹಾಗೆ ಮಾಡಿರಲು ಕಾರಣವೇನು ? ಅಲ್ಲಿ ಹರಿಜನರು ಇಲ್ಲವೇ ? ನನಗೆ ಗೊತ್ತಿರುವ ಪ್ರಕಾರ ಅಲ್ಲಿ ಹರಿಜನರು ಇದ್ದಾರೆ. ಹರಿಜನರಿದ್ದೂ ಅವರಿಗಾಗಿ ಇದ್ದಂತಹ ಸೀಟನ್ನು ತೆಗೆದು ಹಾಕಿರುವುದಕ್ಕೆ ಕಾರಣವೇನು ?

†ಶ್ರೀ ಕೆ. ಪ್ರಭಾಕರ್.—ಅಲ್ಲಿ ಕಾನೂನು ಪ್ರಕಾರ ಹರಿಜನರಿಗೆ ಗಿರಿಜನರಿಗೆ ಸೀಟುಗಳನ್ನು ಕೊಡುವಾಗ ದಾಮಾಷಾ ಪ್ರಕಾರ ಇಷ್ಟು ಜನಸಂಖ್ಯೆ ಇರಬೇಕೆಂದು ಇರುತ್ತದೆ. ದಾಮಾಷಾ ಪ್ರಕಾರ ಅಲ್ಲಿ ಹರಿಜನ-ಗಿರಿಜನರ ಸಂಖ್ಯೆ ಇಷ್ಟು ಇಲ್ಲದ ಕಾರಣ ಅವರಿಗಾಗಿ ಸೀಟನ್ನು ಕಾಯ್ದಿರಿಸಲು ಅವಕಾಶ ಇಲ್ಲ. ಈ ಕಾರಣದಿಂದ ಅವರಿಗೆ ಸೀಟನ್ನು ಕೊಡುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳಿದ್ದೇವೆ. ಅದು ಕ್ರಮವಾಗಿದೆ.

ಶ್ರೀ ಕೆ. ವೆಂಕಟರಾಮಯ್ಯ.—ಅಲ್ಲಿದ್ದಂತಹ ಜನರು ಏನಾದರೂ ಹೊರಟು ಹೋದರೆ ? ಅಲ್ಲಿದ್ದಂತಹ ರಿಸರ್ವ್ ಸೀಟನ್ನು ತೆಗೆಯುವುದಕ್ಕೆ ಕಾರಣವೇನು ? ಅಲ್ಲಿ ಹರಿಜನ-ಗಿರಿಜನರಿಗಾಗಿ ಇದ್ದಂತಹ ಸೀಟನ್ನು ತೆಗೆದುಹಾಕಿ ಅವರಿಗಾಗಿ ಇದ್ದಂತ ಪ್ರಾತಿನಿಧ್ಯವನ್ನು ನಿಮ್ಮ ಕಾಲದಲ್ಲೇ ತೆಗೆದರೆ ಜನ ಏನು ಅನ್ನುತ್ತಾರೆ ? ನಿಮಗೆ ಸರ್ಕಾರದ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ. ಆ ತಪ್ಪು ಮಾಹಿತಿ ಕೊಟ್ಟಂತಹ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಪ್ರಭಾಕರ್.—ನಮ್ಮ ಕಾಲದಲ್ಲಿ ಸ್ವಇಚ್ಛೆಯಿಂದ ತೆಗೆದದ್ದಲ್ಲ. ಜನ ಏನೂ ಹೇಳುವುದಿಲ್ಲ. ಕಾನೂನು ಪ್ರಕಾರ ಸರಿ ಇದೆ. ಒಂದು ಗ್ರಾಮದಲ್ಲಿ ಹರಿಜನರು ಇರತಕ್ಕಂತಹ ಕ್ಷೇತ್ರ ಎನಿದೆ ಆ ಜನ ಸಂಖ್ಯೆಯನ್ನು ಪಕ್ಕದ ಊರಿಗೆ ಸೇರಿಸಿ ಸೀಟು ಇಲ್ಲದಹಾಗೆ ಮಾಡಿ ಪಕ್ಕದ ಊರಿಗೆ ಕೊಟ್ಟರತಕ್ಕಂತಹ ಸಂದರ್ಭಗಳು ಇವೆ. ಇಲ್ಲಿ ಆ ತತ್ವವನ್ನು ಅನುಸರಿಸಿ ಏನಾದರೂ ಮಾಡಿದ್ದಾರೆಯೇ ಎನ್ನುವುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ವೆಂಕಟರಾಮಯ್ಯ.—ಪಕ್ಕದ ಊರಿಗೆ ಸೇರಿರಬಹುದೆಂಬುದನ್ನು ಪರಿಶೀಲನೆ ಮಾಡುತ್ತೇನೆಂದು ತಾವು ಹೇಳುತ್ತೀರಾ; ಅಂಕಿ ಅಂಶಗಳನ್ನು ಸರಿಯಾಗಿ ನಿಮಗೆ ಕೊಟ್ಟಿಲ್ಲ. ಅಲ್ಲಿರತಕ್ಕಂತಹ ವಿಲೇಜ್ ಎಕ್ಸ್‌ಟೆನ್‌ಷನ್ ಆಫೀಸರ್ ದುಡ್ಡು ತಿಂದು ಈ ರೀತಿ ಅನ್ಯಾಯವಾಗಿರತಕ್ಕಂತಹ ಅನೇಕ ಪಂಚಾಯಿತಿಗಳಿವೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಖಂಡಿತವಾಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ವೆಂಕಟರಾಮಯ್ಯ.—ಕುರುಬರ ಹಳ್ಳಿಯಲ್ಲಿ ಮಹಿಳೆಯರಿಗಾಗಿ ಇದ್ದಂತಹ ಸೀಟನ್ನು ರದ್ದು ಮಾಡಿದ್ದಾರೆ. ಅಲ್ಲಿ ಮಹಿಳೆಯರೇ ಇಲ್ಲವೇ ?

ಶ್ರೀ ಕೆ. ಪ್ರಭಾಕರ್.—ಕಾನೂನಿನ ಆಧಾರದ ಮೇಲೆ ಮಾಡಿರುತ್ತಾರೆ. ಕುರುಬರ ಹಳ್ಳಿಯಲ್ಲಿ ೨೦೩ ಮಹಿಳಾ ಜನಸಂಖ್ಯೆ ಇದೆ. ಕಾನೂನು ಪ್ರಕಾರ ಮಾಡಿದ್ದಾರೆಂದು ನನ್ನ ಭಾವನೆ. ಇದನ್ನು ನಾನೇ ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷೆ ಮಾಡಿ ವೈಯಕ್ತಿಕವಾದ ಚೇಷ್ಟೆಯಿಂದ ಏನಾದರೂ ಮಾಡಿದ್ದರೆ ಕಠಿಣವಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

Representation from Kollegal Taluk about Drinking Water.

641 SRI M. SIDDAMADAIAH. (Kollegal)—Will the Minister for Rural Development and Panchayati Raj be pleased to state.—

(*a*) whether any representations have been received by the Government regarding scarcity of drinking water in Kollegal Taluk ;

(*b*) if so, the number of villages where arrangements have been made to provide drinking water by chalking out programme in order to solve the problems of drinking water ;

(*c*) the number of villages where borewells and hand pumps have been installed by the Government which have gone out of order, the number of pumps that are functioning and the reason for the delay in respairing the remaining pumps ?